ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : **367**) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : **368**) ಎಂಬ ಎರಡು ವಿಷಯದ ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆರಿಸಿ ಮತ್ತು ಉತ್ತರಿಸಬೇಕು. ಅಭ್ಯರ್ಥಿಯು ತಾನು ಆಯ್ಕೆ ಮಾಡಿಕೊಂಡು ಉತ್ತರಿಸುವ ವಿಷಯದ ಮುಂದಿನ ವೃತ್ತವನ್ನು ಸ್ಪಷ್ಟವಾಗಿ ಒ.ಎಂ.ಆರ್. ಉತ್ತರ ಹಾಳೆಯಲ್ಲಿರುವ ನಿಗದಿತ ಸ್ಥಳದಲ್ಲಿ ಎನ್‌ಕೋಡ್ ಮಾಡತಕ್ಕದ್ದು. **ವಿಷಯ ಸಂಕೇತವನ್ನು ಎನ್‌ಕೋಡ್ ಮಾಡದಿದ್ದಲ್ಲಿ OMR ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

# 2019

*ಪ್ರಶ್ನೆ ಪತ್ರಿಕೆ ಶ್ರೇಣಿ*

**A**

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಕನ್ನಡ (ಪತ್ರಿಕೆ II)

***ಸಮಯ : $1\frac{1}{2}$ ಗಂಟೆಗಳು***

**ವಿಷಯ ಸಂಕೇತ : 367**

***ಗರಿಷ್ಠ ಅಂಕಗಳು : 100***

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಒ.ಎಂ.ಆರ್.ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| 8 | 1 | 5 | 7 | 2 | 9 | 7 |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. ***ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.*** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*

*ಸೂಚನೆಗಳು :* ಕೆಳಗಿನ ಪದಗಳಿಗೆ (ಪ್ರಶ್ನೆ ಸಂಖ್ಯೆ **1 – 9**) ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪವನ್ನು ಗುರ್ತಿಸಿ.

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1) ನ್ನು ಗುರುತಿಸಬೇಕು.

**1.** ಹಳು ಎಂದರೆ

(1) ಅಳು

(2) ರೋದಿಸು

(3) ಕಾಡು

(4) ಆಲಾಪ

**2.** ತಸ್ಕರ ಎಂದರೆ

(1) ಭಾಸ್ಕರ

(2) ಕಳ್ಳ

(3) ದಿವಾಕರ

(4) ತಕಲಿ

**3.** ಪಂಜ ಎಂದರೆ

(1) ಪಂಜು

(2) ಪಂಚೆ

(3) ಹುಲಿಯ ಅಂಗಾಲು

(4) ಪಂದ್ಯ

**4.** ಪಲ್ವಲ ಎಂದರೆ

(1) ಪಲ್ಲವ

(2) ಪಲ್ಲಟ

(3) ಕೊಳ

(4) ಮೇಲಿನ ಯಾವುದೂ ಅಲ್ಲ

**5.** ಕೋಮಣ, ಇದರ ಸಮಾನಾರ್ಥಕ ಪದಗಳು

(1) ತೋರಣ, ಕಲ್ಯಾಣ

(2) ಲಂಗೋಟಿ, ಕೌಪೀನ

(3) ಕೌಪೀನ, ತೋರಣ

(4) ಕಲ್ಯಾಣ, ಲಂಗೋಟಿ

**6.** ದೂರ್ವೆ ಇದರ ಸಮಾನಾರ್ಥಕ ಪದ

(1) ಹರಟೆ

(2) ಭಯ

(3) ಹಸು

(4) ಗರಿಕೆ

**7.** ದ್ವಿರದ ಎಂದರೆ

(1) ಆನೆ

(2) ಕರಡಿ

(3) ನರಿ

(4) ಜಿಂಕೆ

8. ಪಾಷಾಣ ಎಂಬುದರ ಸಮಾನಾರ್ಥ

(1) ಹಗ್ಗ

(2) ಪಾಯಸ

(3) ಹರಿಶಿಣ

(4) ಕಲ್ಲು

9. ಗೋಸಾಯಿ ಇದರ ಸಮಾನಾರ್ಥಕ ಪದ

(1) ಗೋಶಾಲೆ

(2) ಸನ್ಯಾಸಿ

(3) ಗೋರಕ್ಷಕ

(4) ಸೇವಕಿ

*<u>ಸೂಚನೆಗಳು :</u> ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ **10 – 17**) ವಿರುದ್ಧಾರ್ಥಕ ಪದಗಳನ್ನು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಿಂದ ಗುರ್ತಿಸಿ.*

ಉದಾಹರಣೆ : ತೆಂಕಣ

(1) ಮೂಡಣ

(2) ಬಡಗಣ

(3) ಪಡುವಣ

(4) ತೆಗಣ

ಇಲ್ಲಿ "ತೆಂಕಣ" ಪದಕ್ಕೆ ವಿರುದ್ಧಾರ್ಥಕ ರೂಪ "ಬಡಗಣ" ಎಂಬುದು (2) ನ್ನು ಗುರುತಿಸಬಹುದು.

10. ಸಂಧ್ಯಾಕಾಲ

(1) ಮಧ್ಯಾಹ್ನ

(2) ಪ್ರಾತಃಕಾಲ

(3) ರಾತ್ರಿಕಾಲ

(4) ಒಳ್ಳೆಯ ಕಾಲ

11. ಕೃತಜ್ಞ

(1) ಅಕೃತಜ್ಞ

(2) ಸರ್ವಜ್ಞ

(3) ಕೃತಘ್ನ

(4) ಉಪಕಾರಿ

12. ದುರ್ಬಲ

(1) ಸಬಲ

(2) ಅಬಲ

(3) ಬಲ

(4) ನಿರ್ಬಲ

13. ಮಾನವ

(1) ನರ

(2) ಅಮಾನವ

(3) ಕ್ರೂರಿ

(4) ದಾನವ

14. ಸುವಿಖ್ಯಾತಿ

(1) ಸುಪ್ರಸಿದ್ಧ

(2) ಕುವಿಖ್ಯಾತಿ

(3) ಅಪ್ರಸಿದ್ಧ

(4) ಪ್ರಸಿದ್ಧ

15. ಆಸ್ತಿಕ

(1) ನಾಸ್ತಿಕ

(2) ನಾಸಿಕ

(3) ಧಾರ್ಮಿಕ

(4) ಸಿರಿವಂತ

16. ಜಾತ

(1) ವಿಜಾತ

(2) ಹುಟ್ಟು

(3) ಅಜಾತ

(4) ಸಾವು

17. ಮತ್ಸರ

(1) ಹೊಟ್ಟೆಕಿಚ್ಚು

(2) ಅಮತ್ಸರ

(3) ದುರ್ಮತ್ಸರ

(4) ನಿರ್ಮತ್ಸರ

*__ಸೂಚನೆಗಳು :__ ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು (ಪ್ರಶ್ನೆ ಸಂಖ್ಯೆ 18 – 22) ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ.*

ಉದಾಹರಣೆ : "ಬೆಣ್ಣೆ ಹಚ್ಚು"

(1) ರೊಟ್ಟಿಗೆ ಬೆಣ್ಣೆ ಹಚ್ಚು

(2) ಮೈಯುಜ್ಜುವುದು

(3) ಹೊಗಳುವುದು

(4) ಸೇವೆ ಮಾಡುವುದು

ಇಲ್ಲಿ "ಹೊಗಳುವುದು" ಸರಿಯಾದ ಅರ್ಥ ಆದುದರಿಂದ (3) ನ್ನು ಗುರುತಿಸಬೇಕು.

18. "ಏತಿ ಎಂದರೆ ಪ್ರೇತಿಯನ್ನು" ನುಡಿಗಟ್ಟಿನ ಅರ್ಥ

(1) ಹೇಳಿದ್ದಕ್ಕೆ ವಿರುದ್ಧವಾಗಿ ಹೇಳು

(2) ಕೈಬಿಡು

(3) ನೆಪ ಮಾತ್ರಕ್ಕೆ ಊಟ ಮಾಡು

(4) ಪ್ರಸಿದ್ಧವಾಗಿರುವ

19. ಸೆರಗಿನಲ್ಲಿ ಗಂಟು ಹಾಕಿಕೊಳ್ಳು - ನುಡಿಗಟ್ಟಿನ ಅರ್ಥ

(1) ಜ್ಞಾಪಕದಲ್ಲಿಟ್ಟುಕೊಳ್ಳು

(2) ಪ್ರೀತಿಯಿಂದ ಇರು

(3) ಯಜಮಾನಿಕೆ ನಡೆಸು

(4) ಸ್ವಾವಲಂಬಿಯಾಗುವಂತೆ

20. 'ಗಾಳಿಗೆ ತೂರು'

(1) ರಾಶಿ ಮಾಡು

(2) ಕೈ ಬಿಡು

(3) ತಿರಸ್ಕರಿಸು

(4) ಹೊರಹಾಕು

21. 'ಕೆಂಡಕಾರು'

(1) ಮೋಸ ಮಾಡು

(2) ಹೊಟ್ಟೆಕಿಚ್ಚು ಪಡು

(3) ಬೆಂಕಿಗೆ ಹಾಕು

(4) ಸಿಟ್ಟಾಗು

22. ಮೂಗು ದಾರ ತೊಡಿಸು

(1) ವಿರೂಪಗೊಳಿಸು

(2) ಮುದ್ದುಮಾಡು

(3) ಹತೋಟಿಯಲ್ಲಿ ಇಡು

(4) ಮತ್ತೊಬ್ಬರ ರಕ್ಷಣೆಯಲ್ಲಿರು

*__ಸೂಚನೆಗಳು__ : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ **23 - 27**) ಗೆರೆ ಎಳೆದ ಭಾಗದಲ್ಲಿ ಕೊಡಲಾದ ಇಂಗ್ಲೀಷ್ ರೂಪಕ್ಕೆ ಪರ್ಯಾಯವಾಗಿ ನಾಲ್ಕು ಕನ್ನಡ ರೂಪಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ.*

ಉದಾಹರಣೆ : ಹೆದ್ದಾರಿಯಲ್ಲಿ ಕಾರೊಂದು ಆಕ್ಸಿಡೆಂಟ್ ಗೊಳಗಾಯಿತು.

(1) ಪ್ರಮಾದ

(2) ಅಪಘಾತ

(3) ವಿಪತ್ತು

(4) ಅಕಸ್ಮಾತ್

ಇಲ್ಲಿ "ಅಪಘಾತ" ಎಂಬುದು ಸೂಕ್ತ ರೂಪವಾದುದರಿಂದ (2) ನ್ನು ಗುರುತಿಸಬೇಕು.

23. ಹೊಸದಾದ ಕನ್ನಡ ಚಿತ್ರದ ರಿವ್ಯೂ ನೋಡಿದೆ ಚೆನ್ನಾಗಿದೆ.

(1) ಅನಿಸಿಕೆ

(2) ವಿಮರ್ಶೆ

(3) ಟೀಕೆ

(4) ಹೊರನೋಟ